Attachment ತಂದಿದ್ದರಿಂದ ಅವರು ಒಲ್ಲೆ ಎನ್ನುವ ಮಾತನ್ನು ಹೇಳಿದ್ದರಿಂದ ಈಗ attachment clear ಮಾಡಿ ಪ್ರಾರಂಭ ಮಾಡುತ್ತೇವೆ.

80 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕೋಡಿ–ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು; ಆ ಪೈಕಿ ಎಷ್ಟು ಅಂಗವಿಕಲರಿಗೆ ಸರ್ಕಾರದಿಂದ ಯಾವ ಯೋಜನೆಯಲ್ಲಿ ಮಾಸಿಕ ಸಹಾಯಧನ ನೀಡಲಾಗುತ್ತಿದೆ; ವಿವರ ನೀಡುವುದು);

ಆ) ಈ ಅಂಗವಿಕಲ ಫಲಾನುಭವಿಗಳ ಆಯ್ಕೆಯ ಮಾನದಂಡವೇನು; ಇನ್ನುಳಿದ ಅಂಗವಿಕಲರಿಗೆ ಎಂದಿನಿಂದ ಮಾಸಿಕ ಸಹಾಯಧನ ನೀಡಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಅಂಗವಿಕಲರ ಸಂಖ್ಯೆ 4509.

ಇದರಲ್ಲಿ 4,100 ಅಂಗವಿಕಲರು ಸರ್ಕಾರದಿಂದ ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಮಾಸಿಕ ವೇತನವನ್ನು ಪಡೆಯುತ್ತಿರುವರು.

ಆ) ಅಂಗವಿಕಲ ಮಾಶಾಸನವನ್ನು ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ಫಲಾನುಭವಿಗಳು ಹೊಂದಿರಬೇಕು.

1. ಫಲಾನುಭವಿಯು ಕನಿಷ್ಠ ಶೇ. 40ರಷಟು ಅಂಗವಿಕಲತೆ ಹೊಂದಿರಬೇಕು.
2. ಪೋಷಕರ ಆದಾಯ ವಾರ್ಷಿಕ ರೂ. 6000/–ಗಳಿಗಿಂತ ಕಡಿಮೆ ಇರಬೇಕು.
3. ಆಯಾ ತಾಲ್ಲೂಕಿನ ನಿವಾಸಿಯಾಗಿರಬೇಕು.

ಉಳಿದ ಅಂಗವಿಕಲ ಫಲಾನುಭವಿಗಳು ಆಯಾ ತಾಲ್ಲೂಕಿನ ತಹಶೀಲ್ದಾರ್‌ರವರಿಗೆ ಅರ್ಜಿ ಸಲ್ಲಿಸಿದಲ್ಲಿ ಪರಿಶೀಲಿಸಿ ಸಹಾಯಧನ ನೀಡಲಾಗುವುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಚಿಕ್ಕೋಡಿ–ಸದಲಗ ಮತಕ್ಷೇತ್ರದಲ್ಲಿ 4,500 ಅಂಗವಿಕಲರು ಮಾಸಾಶನ ಪಡೆಯುತ್ತಿದ್ದಾರೆಂದು ಹೇಳಿದ್ದಾರೆ. ಆದರೆ, ಇದು ತಾಲ್ಲೂಕು ಆಗುತ್ತದೆ. ಚಿಕ್ಕೋಡಿ ತಾಲ್ಲೂಕಿನದ್ದು ಲಿಸ್ಟ್ ಕೊಟ್ಟಿದ್ದಾರೆ. ಇದಲ್ಲದೇ ಇನ್ನೂ 400 ಜನರಿಗೆ ಮಾಸಾಶನ ಕೊಡಬೇಕಾಗಿದೆ. ಅದನ್ನು ನೀವು ಯಾವಾಗ ಕೊಡುತ್ತೀರಿ? ಇಷ್ಟು ದಿವಸ ವಿಳಂಬವಾಗಲು ಕಾರಣವೇನು? ಮತ್ತೊಂದು ಏನು ಹೇಳಿದ್ದಾರೆಂದರೆ, ವಾರ್ಷಿಕ ಆದಾಯ ಅವರದ್ದು 6 ಸಾವಿರ ರೂಪಾಯಿ ಎಂದು ಹೇಳಿದ್ದಾರೆ. ಆದರೆ, ಇವತ್ತು ಸಂಧ್ಯಾ ಸುರಕ್ಷತಾ ಯೋಜನೆಯಲ್ಲಿ ವಾರ್ಷಿಕ ಆದಾಯ 20 ಸಾವಿರ ಇದೆ. ಈ 6 ಸಾವಿರ ಹೇಗೆ ಆಯಿತು? ಈ ತರಹ ತಾರತಮ್ಯ ತಾವು ಏಕೆ ಮಾಡುತ್ತಿದ್ದೀರಿ? ಸಂಧ್ಯಾ ಸುರಕ್ಷತಾ ಇರಲಿ, ವೃದ್ಧಾಪ್ಯ ವೇತನ ಇರಲಿ ಅಥವಾ ಅಂಗವಿಲಕರಿಗೆ ಸಂಬಂಧಪಟ್ಟಿದ್ದು ಇರಲಿ, ಇವರಿಗೆ ವಾರ್ಷಿಕ ಆದಾಯ 20 ಸಾವಿರ ಮಾಡಬೇಕು. ದಯವಿಟ್ಟು ಯಾವಾಗ ಇದನ್ನು ತಾವು ಸರಿಪಡಿಸುತ್ತೀರಿ ಎನ್ನುವುದನ್ನು ಹೇಳಬೇಕು. 6 ಸಾವಿರದಿಂದ 20 ಸಾವಿರ ಯಾವಾಗ ಮಾಡುತ್ತೀರಿ? ಅಂಗವಿಕಲರು ತಮ್ಮ ಆದಾಯವನ್ನು ಪಡೆಯಬೇಕಾದರೆ, ಅರ್ಜಿಯನ್ನು ನೆಮ್ಮದಿ ಕೇಂದ್ರಕ್ಕೆ ಕೊಡಬೇಕಾಗುತ್ತದೆ. ಇವತ್ತು ನಮ್ಮ ತಾಲ್ಲೂಕಿನಲ್ಲಿ ನೆಮ್ಮದಿ ಕೇಂದ್ರಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಕರೆಂಟಿನ ವ್ಯವಸ್ಥೆ ಇಲ್ಲ. ಆದುದರಿಂದ ನೇರವಾಗಿ ತಹಶೀಲ್ದಾರರಿಗೆ ಕೊಟ್ಟರೆ, ಅವರು ಡೆಪ್ಯೂಟಿ ತಹಶೀಲ್ದಾರರು ಮತ್ತು ರೆವೆನ್ಯೂ ಇನ್ಸ್‌ಪೆಕ್ಟರ್ ಅವರಿಂದ ವರದಿ ತರಿಸಿಕೊಂಡು ಅವರಿಗೆ ಆದಾಯ ಪತ್ರ ನೀಡಬಹುದು. ಆದಾಯ ಪತ್ರವನ್ನು ನೆಮ್ಮದಿ ಕೇಂದ್ರಕ್ಕೆ ಕೊಡುವುದಕ್ಕಿಂತ ತಹಶೀಲ್ದಾರರಿಗೆ ಕೊಟ್ಟರೆ, ತಕ್ಷಣ ಅವರು ಅದರ ಬಗ್ಗೆ enquiry ಮಾಡುತ್ತಾರೆ, ಆದಾಯ ಪತ್ರ ಕೊಟ್ಟರೆ, ಅಂಗವಿಕಲರಿಗೆ ಮಾಸಾಶನ ಸಿಗುತ್ತದೆ. 400 ಉಳಿಸುವುದಕ್ಕೆ ಕಾರಣವೇನು? ಅವರೇನಾದರು ಕಾಗದಪತ್ರಗಳನ್ನು

ಕೊಟ್ಟಿಲ್ಲವೇ? ಇದಕ್ಕೆ ಕಾರಣವೇನು ಎನ್ನುವ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ, ಆದಾಯದ ಮಿತಿಯನ್ನು ಜಾಸ್ತಿ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವಂಥ ವಿಚಾರ. 400 ಜನಕ್ಕೆ ಮಾಸಾಶನ ದೊರೆಯುತ್ತಿಲ್ಲ, ಅದನ್ನು ಮಂಜೂರು ಮಾಡಿಲ್ಲ ಎನ್ನುವ ವಿಚಾರದಲ್ಲಿ, ಸಂಬಂಧಪಟ್ಟ ತಾಲ್ಲೂಕು ಕಛೇರಿಯಲ್ಲಿ ಒದಗಿಸಬೇಕಾಗಿರುವಂಥ ಮಾಹಿತಿಯಲ್ಲಿ ಲೋಪವಾಗಿರುವುದರಿಂದ ಈ ಒಂದು ಅಡೆತಡೆಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ನಮ್ಮ ಕ್ಷೇತ್ರದ ಅಂಗವಿಕಲರು ನನ್ನ ಹತ್ತಿರ ಬಂದಿದ್ದರು. ಅವರಿಗೆ ಏನೇನು ಮಾಹಿತಿ ಬೇಕೋ, ಅರ್ಜಿ ಕೊಟ್ಟಿದ್ದಾರೆ, ಆದಾಯ ಪತ್ರ ಕೊಟ್ಟಿದ್ದಾರೆ. ಶೇ.40 ರಷ್ಟು ಹೆಚ್ಚು ಅಂಗವಿಕಲತೆ ಹೊಂದಿರುವ ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅರ್ಜಿ ಎಲ್ಲವೂ ಸರಿಯಾಗಿದೆ. ಆದರೆ, ಇದರಲ್ಲಿ ತಡ ಏಕೆ ಆಗುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ. ದಯವಿಟ್ಟು ತಹಶೀಲ್ದಾರರು, ಯಾರಾದರೂ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಅವರಿಗೆ ತಕ್ಷಣ ಮಾಸಾಶನ ಕೊಡಬೇಕೆಂದು ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಆದಾಯ ಒಂದು ಕಡೆ 6 ಸಾವಿರ, ಇನ್ನೊಂದು ಕಡೆ 20 ಸಾವಿರ ಈ ತಾರತಮ್ಯ ಸರಿ ಮಾಡುತ್ತಾರೆಯೇ ಎನ್ನುವುದನ್ನು ದಯವಿಟ್ಟು ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ತಾವು ದಯವಿಟ್ಟು ಉತ್ತರವನ್ನು ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ತಿಳಿಸಿರುವ ಉತ್ತರದಲ್ಲಿ ಬಹಳಷ್ಟು ಅರ್ಜಿಗಳು ವಿಲೇವಾರಿಯಾಗದಿರುವುದಕ್ಕೆ ಕಾರಣವೇನೆಂದರೆ, ಅರ್ಜಿಗಳನ್ನು ಕೊಟ್ಟಿರುತ್ತಾರೆ. ಆದರೆ, physically-handicapped certificate ಕೊಟ್ಟಿರುವುದಿಲ್ಲ. ಇಲ್ಲಿ ಸರ್ಟಿಫಿಕೇಟ್ ಕೊಟ್ಟ ನಂತರ ಆಗುವ ತೊಂದರೆ ಒಂದು ಕಡೆಯಾದರೆ, ಮತ್ತೊಂದು ಕಡೆ ಸರ್ಟಿಫಿಕೇಟ್ ಪಡೆಯಬೇಕಾದರೆ ಕನಿಷ್ಠ 1,000, 1,500 ರೂ.ಗಳಷ್ಟು ದುಡ್ಡು ಕೊಡದಿದ್ದರೆ ಸರ್ಟಿಫಿಕೇಟ್ ಸಿಗುವುದಿಲ್ಲ. ಈ ದಿಸೆಯಲ್ಲಿ ನನ್ನ ಮನವಿ

ಏನೆಂದರೆ, ಈ ಸರ್ಟಿಫಿಕೇಟ್ ಕೊಡಬೇಕಾದರೆ ಮೂವರು ಡಾಕ್ಟರುಗಳು ಇರಬೇಕು. ಇಡೀ ಜಿಲ್ಲೆಯಾದ್ಯಂತ ಆರ್ಥೋಪೆಡಿಕ್ ಸರ್ಜನ್‌ಗಳು ಇಬ್ಬರೋ, ಮೂವರೋ ಇರುತ್ತಾರೆ. ಅವರು ಬಂದು ಸಹಿ ಹಾಕುವವರೆಗೂ ಆ ಸರ್ಟಿಫಿಕೇಟ್ ಸಿಗುವುದಿಲ್ಲ. ಆ ಕಾರಣಕ್ಕೋಸ್ಕರ ಏನಾಗಿದೆಯೆಂದರೆ, ಇದರಲ್ಲಿ ಬಹಳಷ್ಟು ಭ್ರಷ್ಟಾಚಾರವಾಗುತ್ತಿರುವುದರಿಂದ ಸರ್ಟಿಫಿಕೇಟ್ ಪಡೆದುಕೊಳ್ಳುವುದು ಕಷ್ಟವಾಗುತ್ತಿದೆ. ದಯಮಾಡಿ ಆರೋಗ್ಯ ಇಲಾಖೆಯವರೊಂದಿಗೆ ಕುಳಿತು ಸೂಕ್ತ ರೀತಿಯಲ್ಲಿ ಚರ್ಚಿಸಿ ಸುಲಭ ರೀತಿಯಲ್ಲಿ ಈ ಸರ್ಟಿಫಿಕೇಟ್ ಸಿಗುವಂತೆ ಏನಾದರೊಂದು ವಿಧಾನ ಕಂಡು ಹಿಡಿಯುವುದಕ್ಕೆ ಸಾಧ್ಯವೇ ಎಂಬುದನ್ನು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಈಗಾಗಲೇ ಈ ವಿಚಾರವಾಗಿ ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಒಂದು ಸಮಿತಿ ಇದ್ದು, ಅವರು ನೀಡುವ ಅಂಗವೈಕಲ್ಯ ಸರ್ಟಿಫಿಕೇಟ್‌ಗೆ, ಆರ್ಥೋಪೆಡಿಕ್ ಸರ್ಜನ್‌ಗಳ ಸಂಖ್ಯೆ ಕಡಮೆ ಇರುವುದನ್ನು ಆರೋಗ್ಯ ಇಲಾಖೆಯ ಗಮನಕ್ಕೆ ತಂದು ನಾವು ಈಗ ತ್ವರಿತವಾಗಿ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಈಗ ಪ್ರತಿಯೊಂದು ಜಿಲ್ಲೆಯಲ್ಲಿ ಇಂತಿಂಥ ದಿವಸ ಇಂತಿಂಥ ತಾಲ್ಲೂಕಿನಲ್ಲಿ ಈ ಸರ್ಟಿಫಿಕೇಟ್ ನೀಡುವ ವೈದ್ಯರುಗಳ ತಂಡ ಬರುತ್ತಿದೆ ಎಂಬ ಮಾರ್ಗಸೂಚಿಯನ್ನು ಪ್ರಕಟಣೆ ಮೂಲಕ ಕೊಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಮುಂದಿನ ದಿನಮಾನಗಳಲ್ಲಿ ಈ ಲೋಪವನ್ನು ಸರಿಪಡಿಸುವಂತಹ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಆಶ್ವಾಸನೆ ನೀಡುತ್ತೇನೆ.

ಶ್ರೀ ಯು.ಟಿ. ಖಾದರ್: ಮಾನ್ಯ ಉಪಾಧ್ಯಕ್ಷರೆ, ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಇದು ಬಹಳ ಅತ್ಯಗತ್ಯವಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಂಗವಿಕಲರ ಕಲ್ಯಾಣ ಇದೆ. ಇದರ ಕಚೇರಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನ ಕಾರ್ಯಾಲಯದಲ್ಲಿದೆ. ಇವತ್ತು ಅಂಗವಿಕಲರು ಮತ್ತು ಬುದ್ಧಿಮಾಂದ್ಯ ಮಕ್ಕಳಿಗೆ ಸರ್ಟಿಫಿಕೇಟ್ ಬೇಕಾದರೆ ಮತ್ತು ಆ ಕುರಿತಾದ ಕಾರ್ಡು ಪಡೆದುಕೊಳ್ಳಬೇಕಾದರೆ ಇಲ್ಲಿರುವ ಜಿಲ್ಲಾ ಪರಿಷತ್ತಿನ ಕಟ್ಟಡಕ್ಕೆ ಬರಬೇಕು ಹಾಗೂ ಅಲ್ಲಿಂದ ಮತ್ತೊಂದು ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾದರೆ ಸರ್ಕಾರಿ ಆಸ್ಪತ್ರೆಗೆ ಹೋಗಬೇಕು.

ಅಲ್ಲಿ ಆರ್ಥೊಪೆಡಿಕ್ ಸರ್ಜನ್‌ರವರು ಸರ್ಟಿಫಿಕೇಟ್ ನೀಡಿದ ಬಳಿಕ ಬುದ್ಧಿಮಾಂದ್ಯತೆಗೆ ಸಂಬಂಧಿಸಿದಂತೆ ಸರ್ಟಿಫಿಕೇಟ್ ನೀಡಿ ಎಂದು ಕೇಳುವುದಕ್ಕೆ ಅವರಿಗೆ ಮೊದಲೇ ನಡೆಯುವುದಕ್ಕಾಗುವುದಿಲ್ಲ, ಅವರುಗಳು ಹೆಚ್ಚು ಹೊತ್ತು ನಿಲ್ಲುವುದಕ್ಕಾಗುವುದಿಲ್ಲ, ಅಲ್ಲದೆ, ಮನೆಯಿಂದ ತರುವುದೇ ಕಷ್ಟ. ಈ ರೀತಿಯ ಬಹಳಷ್ಟು ಸಮಸ್ಯೆಗಳಿವೆ.

ಇವತ್ತು ನಮ್ಮ ಇಡೀ ಜಿಲ್ಲೆಯಲ್ಲಿ ಬುದ್ಧಿಮಾಂದ್ಯತೆಯುಳ್ಳ ಮಕ್ಕಳಿಗೆ ಸರ್ಟಿಫಿಕೇಟ್ ಕೊಡುವುದಕ್ಕೆ ವೈದ್ಯರುಗಳು ಇಲ್ಲವೆಂದರೆ ನಮಗೆ ನಾಚಿಕೆಯಾಗುತ್ತದೆ. ಇದರ ಬಗ್ಗೆ ಸಚಿವರು ಹೇಳಬೇಕು. ಈ ರಾಜ್ಯದ ಯಾವ ಸರ್ಕಾರಿ ಆಸ್ಪತ್ರೆಯಲ್ಲಿ ಒಬ್ಬ ಸೈಕಾಲಜಿಸ್ಟ್, ಸೈಕಿಯಾಟ್ರಿಸ್ಟ್ ಇದ್ದಾರೆ? ಇದರ ಬಗ್ಗೆ ಇವತ್ತು ಸಚಿವರು ಹೇಳಬೇಕು. ಇಡೀ ನಮ್ಮ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಒಬ್ಬರೇ ಒಬ್ಬರು ಸೈಕಿಯಾಟ್ರಿಸ್ಟ್ ಇಲ್ಲ, ಸೈಕಲಾಜಿಸ್ಟ್ ಇಲ್ಲ.

ಉಪಾಧ್ಯಕ್ಷರು: ಇದು ಅವರಿಗೆ ಸಂಬಂಧಪಟ್ಟ ವಿಚಾರವಲ್ಲ.

ಶ್ರೀ ಯು.ಟಿ. ಖಾದರ್: ಇನ್ನು ಬುದ್ಧಿಮಾಂದ್ಯತೆಯುಳ್ಳ ಮಕ್ಕಳಿಗೆ ಯಾವ ರೀತಿಯಾದ ಸರ್ಟಿಫಿಕೇಟ್ ಕೊಡುತ್ತಾರೆ? ಆದಕಾರಣ, ಆದಷ್ಟು ಶೀಘ್ರವಾಗಿ ಪ್ರತಿ ಜಿಲ್ಲೆಗಳಿಗೆ ಒಬ್ಬ ಸೈಕಲಾಜಿಸ್ಟ್ ಮತ್ತು ಒಬ್ಬರು ಸೈಕಿಯಾಟ್ರಿಸ್ಟ್ ಅವರನ್ನು ತಕ್ಷಣವೇ ನೇಮಿಸುವ ಕೆಲಸ ಮಾಡಬೇಕು.

ಉಪಾಧ್ಯಕ್ಷರು: ಅವರೇನು ಮಾಡುವುದಕ್ಕಾಗುತ್ತದೆ? ಈ ವಿಚಾರಗಳೆಲ್ಲವನ್ನೂ ತಾವು ಇಲಾಖಾ ಬೇಡಿಕೆಗಳ ಮೇಲೆ ಮಾತನಾಡಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಅದನ್ನು ಮಾಡುತ್ತಾರೆಯೇ?

ಉಪಾಧ್ಯಕ್ಷರು: ಅದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಅದನ್ನು ಪರಿಶೀಲಿಸುವಂಥಾದ್ದೇನಿದೆ?

ಉಪಾಧ್ಯಕ್ಷರು: ಇದನ್ನು ಇಲ್ಲಿಗೇ ಮುಕ್ತಾಯಗೊಳಿಸುತ್ತಿದ್ದೇನೆ. ಈ ಪ್ರಶ್ನೆ ಇಲ್ಲಿಗೆ ಮುಕ್ತಾಯವಾಗಿದೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಇದನ್ನು ಪರಿಶೀಲಿಸುವಂತಹ ಅವಶ್ಯಕತೆಯಾದರೂ ಏನಿದೆ? ದಯವಿಟ್ಟು ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಯು.ಟಿ. ಖಾದರ್: ಆದಕಾರಣ, ಇದರ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು: ನಿಮ್ಮ ಸಮಸ್ಯೆಗಳೆಲ್ಲವನ್ನೂ ಬೇಡಿಕೆಗಳ ಮೇಲೆ ಮಾತನಾಡುವಾಗ ಪ್ರಸ್ತಾಪಿಸಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೇಡಿಕೆಗಳೇನಿವೆ, ಅದರ ಮೇಲೆ ಚರ್ಚೆ ಮಾಡಿ. ಇನ್ನು ನಿಮಗೆ ಮಾತನಾಡಲು ಅವಕಾಶ ನೀಡುವುದಿಲ್ಲ.

813 ಶ್ರೀ ರುದ್ರೇಶಗೌಡ ವೈ.ಎನ್. : ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಪ್ರಸಕ್ತ ಸಾಲಿನಲ್ಲಿ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಆಲೂಗಡ್ಡೆ ಬಿತ್ತನೆ ಮಾಡಿದ್ದು, ಈ ಬೆಳೆಗೆ ಯಾವುದಾದರೂ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಿತ್ತನೆ ಮಾಡಿರುವ ಆಲೂಗಡ್ಡೆಯು ನಾಶವಾಗುತ್ತಿದ್ದು ರೈತರಿಗೆ ಸಹಾಯ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಬೆಳೆ ನಾಶವಾಗಿದ್ದಲ್ಲಿ ರೈತರಿಗೆ ಪರಿಹಾರ ನೀಡಲಾಗುವುದೇ?

ಶ್ರೀ ವಿ. ಉಮೇಶ್ ಕತ್ತಿ (ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ಹೌದು.

ಹಾಸನ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 17,500 ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬಿತ್ತನೆಯಾಗಿದ್ದು, ಜಿಲ್ಲೆಯ ಕೆಲವು ಭಾಗಗಳಲ್ಲಿ ಬೆಳೆಗೆ ಅಂಗಮಾರಿ ರೋಗದ ಲಕ್ಷಣಗಳು ಕಂಡುಬಂದಿರುವುದು ಗಮನಕ್ಕೆ ಬಂದಿದೆ.